ಅನುಬಂಧ II

ಕರ್ನಾಟಕ ವಿಧಾನಸಭೆ

ಹನ್ನೊಂದನ್ನೇ ವಿಧಾನಸಭೆ

ಮೂರನೇ ಅಧಿವೇಶನ

(ಮುಂದುವರೆದ ಉಪವೇಶನಗಳು)

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿ ವಸೂಲಿ) ಮತ್ತು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2001,

(2001ರ ವಿಧಾನಸಭೆಯ ವಿಧೇಯಕ ಸಂಖ್ಯೆ 16)

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿ ವಸೂಲಿ) ಅಧಿನಿಯಮ, 1976 ಮತ್ತು ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ) ಅಧಿನಿಯಮ, 1959ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿ ವಸೂಲಿ) ಅಧಿನಿಯಮ, 1976 (1976 ರ ಕರ್ನಾಟಕ ಅಧಿನಿಯಮ 51) ಮತ್ತು ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ) ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 14) ಇವುಗಳನ್ನು ಮತ್ತಷ್ಟು ತಿದ್ದುಪಡಿ ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತೆರಡನೇ ವರ್ಷದಲ್ಲಿ ಕರ್ನಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ವಿದ್ಯುಚ್ಛಕ್ತಿ (ಬಾಕಿ ವಸೂಲಿ) ಮತ್ತು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2001, ಎಂದು ಕರೆಯತಕ್ಕದ್ದು.

2. ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. 1976ರ ಕರ್ನಾಟಕ ಅಧಿನಿಯಮದ 51ರ ತಿದ್ದುಪಡಿ.- ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿ ವಸೂಲಿ) ಅಧಿನಿಯಮ, 1976 ರಲ್ಲಿ (1976ರ ಕರ್ನಾಟಕ ಅಧಿನಿಯಮ, 51),-

(1) ದೀರ್ಘ ಶೀರ್ಷಿಕೆಯಲ್ಲಿ "ವಿದ್ಯುಚ್ಛಕ್ತಿ ಮಂಡಳಿ" ಎಂಬ ಪದಗಳಿಗೆ "ವಿದ್ಯುಚ್ಛಕ್ತಿ ರವಾನೆ ನಿಗಮ"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) ಪ್ರಸ್ತಾವನೆಯಲ್ಲಿ "ವಿದ್ಯುಚ್ಛಕ್ತಿ ಮಂಡಳಿ" ಎಂಬ ಪದಗಳು ಕಂಡು ಬರುವ ಎರಡು ಕಡೆಗಳಲ್ಲಿ "ವಿದ್ಯುಚ್ಛಕ್ತಿ ರವಾನೆ ನಿಗಮ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(3) 1ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ವಿದ್ಯುಚ್ಛಕ್ತಿ ಮಂಡಳಿ" ಎಂಬ ಪದಗಳಿಗೆ "ವಿದ್ಯುಚ್ಛಕ್ತಿ ರವಾನೆ ನಿಗಮ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(4) 2ನೇ ಪ್ರಕರಣದಲ್ಲಿ,-

(ಎ) (1) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು,

ಎಂದರೆ:-

``(1) "ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ" ಎಂದರೆ, ಕಂಪನಿಗಳ ಅಧಿನಿಯಮ, 1956ರ ಅಡಿಯಲ್ಲಿ ಎಂದು ರವಾನೆ ಕಂಪನಿ ಎಂದು ನಿಗಮಿತವಾದ ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ"

(ಬ) (2)ನೇ ಖಂಡದಲ್ಲಿ "ಮಂಡಳಿ" ಎಂಬ ಪದಕ್ಕೆ "ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು, ಎಂದರೆ:-

"ವಿವರಣೆ:- ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ರ 14ನೇ ಪ್ರಕರಣಕ್ಕೆ ಅನುಸಾರವಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ (ಇಲ್ಲಿ ಇನ್ನು ಮುಂದೆ 'ಮಂಡಳಿ' ಎಂದು ಉಲ್ಲೇಖಿಸಲಾಗಿದೆ) ಸ್ವತ್ತು, ಸ್ವತಿನಲ್ಲಿಯ ಯಾವುದೇ ಹಿತಾಸಕ್ತಿ ಅಥವಾ ಯಾವುದೇ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮಕ್ಕೆ ಮೊದಲ ಸಲ ವರ್ಗಾವಣೆಯಾಗುವ ಜಾರಿ ದಿನಾಂಕಕ್ಕೆ ಪೂರ್ವದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಮಂಡಳಿಗೆ ಸಂದಾಯವಾಗಬೇಕಾಗಿದ್ದ ಯಾವುದೇ ಮೊಬಲಗನ್ನು, ಈ ಅಧಿನಿಯಮದ ಉದ್ದೇಶಕ್ಕಾಗಿ ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮಕ್ಕೆ ಸಂದಾಯವಾಗತಕ್ಕ ಬಾಕಿಗಳು ಎಂದು ಭಾವಿಸತಕ್ಕದ್ದು."

(5) 3ನೇ ಪ್ರಕರಣದಲ್ಲಿ "ಮಂಡಳಿ" ಎಂಬ ಪದಕ್ಕೆ "ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. 1959ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.- ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ) ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 14) 2ನೇ ಪ್ರಕರಣದಲ್ಲಿ,-

(1) (1)ನೇ ಖಂಡದಲ್ಲಿ "ರಾಜ್ಯ ವಿದ್ಯುಚ್ಛಕ್ತಿ ಮಂಡಳಿ" ಎಂಬ ಪದಗಳು ಕಂಡು ಬರುವ ಕಡೆಗಳಲ್ಲೆಲ್ಲ "ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (3)ನೇ ಖಂಡದಲ್ಲಿ (ಎ) ಉಪಖಂಡಕ್ಕೆ ಈ ಮುಂದಿನ ಉಪಖಂಡವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಕಂಪನಿಗಳ ಅಧಿನಿಯಮ, 1956ರ ಅಡಿಯಲ್ಲಿ ಎಂದು ರವಾನೆ ಕಂಪನಿ ಎಂದು ನಿಗಮಿತವಾದ ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ ಎಂಬ ಪದಾವಳಿಯು, ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ 1999ರ 14ನೇ ಪ್ರಕರಣಕ್ಕೆ ಅನುಸಾರವಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸ್ವತ್ತು, ಸ್ವತ್ತಿನಲ್ಲಿಯ ಯಾವುದೇ ಹಿತಾಸಕ್ತಿ ಅಥವಾ ಯಾವುದೇ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮಕ್ಕೆ ಮೊದಲ ಸಲ ವರ್ಗಾವಣೆಯಾಗುವ ಜಾರಿ ದಿನಾಂಕಕ್ಕೆ ಪೂರ್ವದಲ್ಲಿ ಸರಬರಾಜು ಮಾಡಿದ ಇಂದನ ಸಂಬಂಧದಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಒಳಗೊಂಡಿರುವುದಾಗಿ ಭಾವಿಸತಕ್ಕದ್ದು."

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 (1999ರ ಕರ್ನಾಟಕ ಅಧಿನಿಯಮ 25) ಅಧಿನಿಯಮಿಸಿದರಿಂದಾಗಿ ಉದ್ಭವಿಸಿದ ಅನುಷಂಗಿಕ ಬದಲಾವಣೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿ ವಸೂಲಿ) ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 51) ಮತ್ತು ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ) ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 14) ಇವುಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ. ಯುಕ್ತವಾಗಿರುವುದರಿಂದ;

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ರಾಜ್ಯದ ಬೊಕ್ಕಸಕ್ಕೆ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು

ಯಕೂಬ್ ಪರೀಫ್
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿಗಳ ವಸೂಲಿ) ಅಧಿನಿಯಮ, 1976, 1999ರ (1976ರ ಕರ್ನಾಟಕ ಅಧಿನಿಯಮ 51) ಉದ್ಧೃತ ಭಾಗ

X X X

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬಾಕಿ ಬರಬೇಕಾದ ಕೆಲವು ಮೊಬಲಗುಗಳ ತ್ವರಿತ ವಸೂಲಿಗಾಗಿ ಉಪಬಂಧಿಸುವ ಅಧಿನಿಯಮ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬಾಕಿ ಬರಬೇಕಾದ ಕೆಲವು ಮೊಬಲಗುಗಳ ತ್ವರಿತ ವಸೂಲಿಗಾಗಿ ಉಪಬಂಧಿಸುವುದು ಸಮಯೋಚಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು

1. **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿಗಳ ವಸೂಲಿ) ಅಧಿನಿಯಮ, 1976, ಎಂದು ಕರೆಯತಕ್ಕದ್ದು.

(2) ಪರಿಭಾಷೆಗಳು.- x x x

(1) "ಮಂಡಳಿ" ಎಂದರೆ, ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಕೇಂದ್ರಾಧಿನಿಯಮ 1948ರ 54) 5ನೇ ಪ್ರಕರಣದ ಮೇರೆಗೆ ರಚಿತವಾದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ;

(2) "ಬಾಕಿಗಳು" ಎಂದರೆ, ಕೆಳಕಂಡವುಗಳ ಬಾಬ್ತು ವಿದ್ಯುಚ್ಛಕ್ತಿ ಮಂಡಳಿಗೆ ಸಂದಾಯವಾಗಬೇಕಾದ ಯಾವುದೇ ಮೊಬಲಗು;

X X X

(3) ಸಂದಾಯ ಮಾಡಬೇಕಾದ ದಿನಾಂಕಗಳನ್ನು ಬಿಲ್ಲುಗಳನ್ನು ತಿಳಿಸುವುದು ಮತ್ತು ಸಂದಾಯ ಮಾಡದಿರುವುದರ ಪರಿಣಾಮ.- (1) ಋಣಿಯು ಮಂಡಳಿಗೆ ಸಂದಾಯ ಮಾಡಬೇಕಾದ ಬಾಕಿಗಳ ಬಗೆಗಿನ ಪ್ರತಿಯೊಂದು ಬಿಲ್ಲು ನಿಯಮಿಸಲಾದ ನಮೂನೆಯಲ್ಲಿ ಇರತಕ್ಕದ್ದು, ಮತ್ತು ಅಂಥ ಬಾಕಿಗಳನ್ನು ಯಾವ ದಿನಾಂಕದೊಳಗೆ ಸಲ್ಲಿಸಬೇಕೆಂಬುದನ್ನು ಅದರಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಳಕೆಯ ಮೇಲೆ ತೆರಿಗೆ) ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 14) ಉದ್ಧೃತ ಭಾಗ

X X X

(2) ಪರಿಭಾಷೆ.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.-

(1) 'ಬಳಕೆದಾರ' ಎಂಬುದು, ಶುಲ್ಕಗಳ ಸಂದಾಯದ ಆಧಾರದ ಮೇಲೆ ಅಥವಾ ಅನ್ಯಥಾ ಒಬ್ಬ ಲೈಸನ್ಸ್‌ದಾರನು ಯಾರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿರುವನೋ ಆ ಸ್ಥಳೀಯ ಪ್ರಾಧಿಕಾರ, ಕಂಪನಿ ಅಥವಾ ಇತರ ವ್ಯಕ್ತಿ, ಮತ್ತು ಸ್ವತ: ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಒಬ್ಬ ಲೈಸನ್ಸ್‌ದಾರನು ಅಥವಾ ಇತರ ವ್ಯಕ್ತಿಯು ಒಳಗಾಗುತ್ತಾನೆ. ಆದರೆ ಇತರರಿಗೆ ಸರಬರಾಜು ಮಾಡಲು ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯು ಯಾರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದೆಯೋ ಆ ಲೈಸನ್ಸ್‌ದಾರನು ಒಳಗೊಳ್ಳುವುದಿಲ್ಲ, ಮತ್ತು 'ಬಳಕೆ' ಎಂಬ ಪದವನ್ನು ತದನುಸಾರವಾಗಿ ಅದರ ವ್ಯಾಕರಣ ವ್ಯತ್ಯಾಸಗಳೊಡನೆ ಅರ್ಥೈಸತಕ್ಕದ್ದು;

ವಿವರಣೆ:- ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ, ಇತರರಿಗೆ ಸರಬರಾಜು ಮಾಡಲು ಯಾರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದೆಯೋ ಆ ಲೈಸನ್ಸ್‌ದಾರನು ತನಗಾಗಿ ವಿದ್ಯುಚ್ಛಕ್ತಿಯ ಯಾವುದೇ ಭಾಗವನ್ನು ಬಂಳಸಿಕೊಂಡಲ್ಲಿ, ಹಾಗೆ ಬಳಸಿಕೊಂಡ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಆತನನ್ನು ಬಳಕೆದಾರ ಎಂಬುದಾಗಿ ಭಾವಿಸತಕ್ಕದ್ದು;

X X X

(1) "ಲೈಸನ್ಸ್‌ದಾರ" ಎಂದರೆ,-

(ಎ) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ (1948ರ ಕೇಂದ್ರಾಧಿನಿಯಮ I. IV) 54) 5ನೇ ಪ್ರಕರಣದ ಅಡಿಯಲ್ಲಿ ರಚಿತವಾದ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ;

X X X

—0—0—0—

BLANK PAGE